KATK010000032021

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.2/2021**

ಪ್ರಾ.ಸಾ. ಃ **1**

ದೋ.ಸಾ. ಃ **3**

ದಿ.**12.12.2024.**

ಹೆಸರು ಃ ಕೆ.ಆರ್. ನಂಜುಂಡ ಶರ್ಮ

ತಂದೆಯ ಹೆಸರು ಃ ರಾಮಚಂದ್ರನ್ ಹೆಚ್.ಎನ್.

ವಯಸ್ಸು ಃ **27** ವರ್ಷ

ಉದ್ಯೋಗ ಃ ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಚೇರಿ, ತುಮಕೂರು

ವಾಸಸ್ಥಳ ಃ ನೃಪತುಂಗ ಬಡಾವಣೆ, ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.19.06.2020 ರಿಂದ ನಾನು ತುಮಕೂರು ತಾಲ್ಲೂಕು ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.**19.09.2020** ರಂದು ತುಮಕೂರಿನ ಸಿಇಎನ್ ಪೋಲೀಸ್ ಠಾಣೆಯ ಗಾಂಜಾ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ನಮ್ಮ ತಹಸೀಲ್ದಾರರು ನನ್ನನ್ನು ಮತ್ತು ಡಿ ಗ್ರೂಪ್ ನೌಕರ ಹರೀಶರವರನ್ನು ನೇಮಕ ಮಾಡಿ ಜ್ಞಾಪನ ಪತ್ರವನ್ನು ಕೊಟ್ಟಿದ್ದರು. ಆ ಜ್ಞಾಪನ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**1** ಎಂದು ಗುರುತಿಸಲಾಯಿತು. ತಹಸೀಲ್ದಾರರು ನನ್ನನ್ನು ಮತ್ತು ಹರೀಶ್ ರವರನ್ನು ಪಂಚರಾಗಿ ನೇಮಕ ಮಾಡಿ ಜ್ಞಾಪನ ಪತ್ರ ಕೊಟ್ಟ ನಂತರ ನಾನು ಮತ್ತು ಹರೀಶ್ ಬೆಳಿಗ್ಗೆ **10.15** ಗಂಟೆಗೆ ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ಹಾಜರಾದೆವು. ನಾನು ಸಿಇಎನ್ ಪೋಲೀಸ್ ಠಾಣೆಗೆ ಹರೀಶ್ ರವರ ಜೊತೆ ಹೋದಾಗ ಠಾಣೆಯಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ವಿಷಯ ಪರಿವೀಕ್ಷಕರಾದ ಸುನಿಲ್ ಕುಮಾರ್, ಕಾನೂನು

ಮಾಪನ ಶಾಸ್ತ್ರ ನಿರೀಕ್ಷಕರಾದ ರವೀಶ್ ಚಂದ್ರ ಇದ್ದರು. ಉರ್ಡಿಗೆರೆ ಬಸವೇಶ್ವರ ದೇವಸ್ಥಾನದ ಎದುರು ಒಬ್ಬ ಆಸಾಮಿ ಅಮ್ಮದ್ ಖಾನ್ ಗಾಂಜಾ ಮಾರಾಟ ಮಾಡುವಾಗ ಪೋಲೀಸರಿಗೆ ಸಿಕ್ಕಿಬಿದ್ದಿದ್ದು, ಅಲ್ಲಿಗೆ ಮಹಜರ್ ಮಾಡಲು ಹೋಗಬೇಕೆಂದು ಠಾಣೆಯಲ್ಲಿ ಇದ್ದಂತಹ ಪೋಲೀಸ್ ಉಪ ನಿರೀಕ್ಷಕರಾದ ಶಮೀನ್ ನಮಗೆ ತಿಳಿಸಿದರು.

**3.** ನಾವು ಪೋಲೀಸ್ ಜೀಪಿನಲ್ಲಿ ಉರ್ಡಿಗೆರೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿ ಜೀಪನ್ನು ನಿಲ್ಲಿಸಿ, ಅಮ್ಮದ್ ಖಾನ್ ರವರ ಮನೆಗೆ ಹೋದೆವು. ಅಲ್ಲಿಗೆ ಹೋದಾಗ ಪೋಲೀಸರ ಜೊತೆಗೆ ನ್ಯಾಯಾಲಯದ ಮುಂದಿರುವ ಆರೋಪಿ ಅಮ್ಜದ್ ಖಾನ್ ಇದ್ದರು. ಆರೋಪಿಯ ಅಂಗಶೋಧನೆ ಮಾಡುವ ಸಲುವಾಗಿ ಪತ್ರಾಂಕಿತ ಅಧಿಕಾರಿ ಆರೋಪಿಯನ್ನು ಕೇಳಿದರು. ಅದಕ್ಕೆ ಆರೋಪಿ ಒಪ್ಪಿಕೊಂಡನು. ಪತ್ರಾಂಕಿತ ಅಧಿಕಾರಿ ಮತ್ತು ನಾವು ಸ್ವ ಅಂಗಶೋಧನೆಯನ್ನು ಮಾಡಿಕೊಂಡು, ಯಾವುದೇ ಗಾಂಜಾ ಇಲ್ಲವೆಂದು ಖಾತ್ರಿಪಡಿಸಿಕೊಂಡು, ನಂತರ ಆರೋಪಿಯ ಅಂಗಶೋಧನೆಯನ್ನು ಮಾಡಲಾಯಿತು. ಆರೋಪಿಯ ಕೈಯಲ್ಲಿ ಪೇಪರ್ ಕವರಿನಲ್ಲಿ ಅರ್ಧಂಬರ್ಧ ಒಣಗಿರುವ ಗಾಂಜಾ ಸೊಪ್ಪು, ಬೀಜ ಮೊಗ್ಗು ಇರುವಂತಹ ಗಾಂಜಾ ಇತ್ತು. ಅದರ ವಾಸನೆಯಿಂದ ಗಾಂಜಾ ಎಂದು ಖಾತ್ರಿಪಡಿಸಿಕೊಂಡೆವು. ಆ ಸಮಯದಲ್ಲಿ ಹಾಜರಿದ್ದ ಕಾನೂನು ಮಾಪನ ಶಾಸ್ತ್ರ ಇಲಾಖೆಯ ರವೀಶ್ ಚಂದ್ರ ರವರಿಗೆ ಆ ಪೇಪರಿನಲ್ಲಿದ್ದ ಗಾಂಜಾವನ್ನು ತೂಕ ಮಾಡಲು ಹೇಳಿದ್ದು ರವೀಶ್ ಚಂದ್ರ ರವರು ತಾನು ತಂದಿದ್ದ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಜೀರೋ ಮಾಡಿ ಗಾಂಜಾವನ್ನು ತೂಕ ಮಾಡಿದಾಗ ಅದರ ತೂಕ ಕವರ್ ಸೇರಿ **400** ಗ್ರಾಂ ಕಂಡುಬಂತು. ಆ ಗಾಂಜಾವನ್ನು ಮಹಜರ್ ಮಾಡಿ, ಬಿಳಿ ಬಟ್ಟೆಯಲ್ಲಿ ಹಾಕಿ, ಬಾಯನ್ನು ಕಟ್ಟಿ, ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ಮಹಜರನ್ನು ಮಾಡುವಾಗ ಬೆಳಿಗ್ಗೆ **11.15-12.15** ಗಂಟೆ ಸಮಯ ಆಗಿತ್ತು. ಸ್ಥಳದಲ್ಲಿ ಮಹಜರನ್ನು ಟೈಪು ಮಾಡಿ, ಪ್ರಿಂಟ್ ತೆಗೆದ ನಂತರ ಮಹಜರಿಗೆ ಸಹಿ ಮಾಡಿದ್ದೇನೆ. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**2** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**2(ಎ)** ಎಂದು ಗುರುತಿಸಲಾಯಿತು.

**4. 1** ನೇ ಆರೋಪಿ ಅಮ್ಜದ್ ಖಾನ್ ಅನ್ನು ವಿಚಾರಿಸಿದಾಗ ದುಡ್ಡಿನ ಆಸೆಗೋಸ್ಕರ ಆ

ಗಾಂಜಾವನ್ನು ಮಾರಾಟ ಮಾಡಲು ಇಟ್ಟುಕೊಂಡಿದ್ದೇನೆ, ಆ ಬಗ್ಗೆ ಯಾವುದೇ ಪರವಾನಗಿ ಇಲ್ಲ ಎಂದು ಹೇಳಿದನು. ಆ ಗಾಂಜಾವನ್ನು ನಾರಾಯಣಪ್ಪ ಎಂಬುವವರಿಂದ ಖರೀದಿ ಮಾಡಿದ್ದೇನೆಂದು ಹೇಳಿದನು. ನಾರಾಯಣಪ್ಪನನ್ನು ವಿಚಾರಣೆ ಮಾಡಲು ಮತ್ತು ಮಹಜರ್ ಮಾಡಲು ಪೋಲೀಸರು ನಾವೇ ಪಂಚಾಯತುದಾರರಾಗಿ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ **1** ನೇ ಆರೋಪಿ ಅಮ್ಜದ್ ಖಾನನ ಮನೆಯಿಂದ **1** ಕಿ ಮೀ ದೂರದಲ್ಲಿರುವ ಬೇವಿನಹಳ್ಳಿ ಕ್ರಾಸ್ ನಲ್ಲಿರುವ ನಾರಾಯಣಪ್ಪನ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿಗೆ ಹೋಗಿ ಜೀಪನ್ನು ನಿಲ್ಲಿಸಿ, ಮುಂದುವರೆದು **2** ನೇ ಆರೋಪಿ ನಾರಾಯಣಪ್ಪನ ಮನೆಗೆ **1** ನೇ ಆರೋಪಿ ಕರೆದುಕೊಂಡು ಹೋದನು. ಒಂದು ಕಾಂಪೌಂಡು ಒಳಗಡೆ **2** ನೇ ಆರೋಪಿ ನಾರಾಯಣಪ್ಪ ನಿಂತಿದ್ದನು. ಆತನಿಂದಲೇ ಗಾಂಜಾ ಖರೀದಿ ಮಾಡಿದ್ದೇನೆಂದು **1** ನೇ ಆರೋಪಿ ಅಮ್ಜದ್ ಖಾನ್ **2** ನೇ ಆರೋಪಿಯನ್ನು ತೋರಿಸಿ ಹೇಳಿದನು. ನಾರಾಯಣಪ್ಪನನ್ನು ವಿಚಾರಿಸಿದಾಗ **1** ನೇ ಆರೋಪಿಗೆ ಗಾಂಜಾ ಮಾರಾಟ ಮಾಡಿದ್ದು ಒಪ್ಪಿಕೊಂಡನು. ಗಾಂಜಾವನ್ನು ಎಲ್ಲಿಟ್ಟಿದ್ದೀ ಎಂದು ಕೇಳಿದಾಗ **2** ನೇ ಆರೋಪಿ ನಾರಾಯಣಪ್ಪನ ಮನೆಯ ಮುಂದೆ ತೆಂಗು, ಬಾಳೆಗಿಡ, ಅಡಿಕೆ ಮತ್ತು ನುಗ್ಗೇಗಿಡಗಳ ಬುಡದಲ್ಲಿ ಗಾಂಜಾವನ್ನು ಇಟ್ಟ ಬಗ್ಗೆ **2** ನೇ ಆರೋಪಿ ನಾರಾಯಣಪ್ಪ ತೋರಿಸಿದನು. ಆ ಗಾಂಜಾವನ್ನು ಮಾರಾಟ ಮಾಡುವ ಸಲುವಾಗಿ ಇಟ್ಟಿದ್ದೇನೆಂದು **2** ನೇ ಆರೋಪಿ ನಾರಾಯಣಪ್ಪ ಹೇಳಿದನು. ಗಾಂಜಾ ಇಟ್ಟಿದ್ದ ಜಾಗಕ್ಕೆ ನಾರಾಯಣಪ್ಪನೇ ಕರೆದುಕೊಂಡು ಹೋದನು. ಆ ಮರಗಳ ಬುಡದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಗಾಂಜಾ ಇಟ್ಟಿದ್ದನು. ಆ ಚೀಲದ ಒಳಗಡೆ ಅರ್ಧಂಬರ್ಧ ಒಣಗಿದ ಗಾಂಜಾ ಸೊಪ್ಪು, ಮೊಗ್ಗು ಬೀಜ ಕಂಡುಬಂತು. ಆ ಗಾಂಜಾ ಎಲ್ಲಿಂದ ಬಂತು ಎಂದು ನಾರಾಯಣಪ್ಪನನ್ನು ಕೇಳಿದರು. ಅವರ ಮನೆಯಿಂದ **500** ಮೀಟರ್ ದೂರದಲ್ಲಿ ಜೋಳದ ಬೆಳೆಯ ಮಧ್ಯದಲ್ಲಿ ಗಾಂಜಾ ಗಿಡವನ್ನು ಬೆಳೆಸಿದ್ದೇನೆಂದು, ಅದರಿಂದ ಆ ಗಾಂಜಾವನ್ನು ತಂದು ಇಲ್ಲಿಟ್ಟಿದ್ದೇನೆಂದು ಹೇಳಿದನು. ಗಿಡಗಳ ಬುಡದಲ್ಲಿ ಇಟ್ಟಂತಹ ಗಾಂಜಾವನ್ನು ರವೀಶ್ ಚಂದ್ರ ರವರು ತೂಕದ ಯಂತ್ರದಿಂದ ತೂಕ ಮಾಡಿದಾಗ ಅದರ ಒಟ್ಟು ತೂಕ **2** ಕೆಜಿ **820** ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ, ಬಾಯನ್ನು ಕಟ್ಟಿ, ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ಸ್ಥಳದಲ್ಲಿ ಮಹಜರನ್ನು ಟೈಪು ಮಾಡಿ, ಪ್ರಿಂಟ್ ತೆಗೆದ ನಂತರ ನಾನು ಸಹಿ ಮಾಡಿದ್ದೇನೆ. ಆ ಮಹಜರನ್ನು

ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ3 ಎಂದು, ಆವಾಗ ಮಾಡಿದ ನನ್ನ ಸಹಿಯನ್ನು ನಿಶಾನೆ ಪಿ3(ಎ)ಎಂದು ಗುರುತಿಸಲಾಯಿತು.

5. ಅಲ್ಲಿಂದ 2 ನೇ ಆರೋಪಿ ನಾರಾಯಣಪ್ಪ ನಮ್ಮನ್ನು ಲಕ್ಷ್ಮೀದೇವಮ್ಮನಿಗೆ ಸೇರಿದ ಜಮೀನಿನ ಹತ್ತಿರ ಕರೆದುಕೊಂಡು ಹೋದನು. ಲಕ್ಷೀದೇವಮ್ಮನಿಗೆ ಸೇರಿದ ಜಮೀನಿನಲ್ಲಿ ನಾರಾಯಣಪ್ಪ ಗಾಂಜಾ ಗಿಡಗಳನ್ನು ಬೆಳೆಸಿದ ಬಗ್ಗೆ ತೋರಿಸಿದನು. ಗಾಂಜಾ ಗಿಡಗಳನ್ನು ಬೆಳೆಸಿದ ಬಗ್ಗೆ ದಾಳಿಯಾಗುತ್ತದೆ ಎಂದು ಟಿವಿಯಲ್ಲಿ ನ್ಯೂಸ್ ಬಂದ ನಂತರ ಲಕ್ಷ್ಮೀದೇವಮ್ಮನ ಜಮೀನಿನಲ್ಲಿ ಬೆಳೆದಂತಹ ಗಾಂಜಾ ಗಿಡಗಳನ್ನು ಕಿತ್ತು ತನ್ನ ಮನೆಯ ಮುಂದೆ ಅಡಿಕೆ, ತೆಂಗು, ನುಗ್ಗೇಗಳ ಬುಡದಲ್ಲಿ ಇಟ್ಟಿದ್ದೇನೆಂದು ಹೇಳಿದನು. ಲಕ್ಷ್ಮೀದೇವಮ್ಮನ ಜಮೀನಿಗೆ ಹೋದಾಗ ಗಿಡಗಳನ್ನು ಕಿತ್ತ ಬಗ್ಗೆ ಗುಂಡಿ ಕಂಡುಬಂತು. ಆ ಜಾಗದಲ್ಲಿ ಸ್ಯಾಂಪಲ್ ಮಣ್ಣನ್ನು ತೆಗೆದುಕೊಂಡರು. ಸುಮಾರು 50 ಗ್ರಾಂ ನಷ್ಟು ಸ್ಯಾಂಪಲ್ ಮಣ್ಣನ್ನು ಮತ್ತು 50 ಗ್ರಾಂ ಸಾದಾ ಮಣ್ಣನ್ನು ತೆಗೆದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯನ್ನು ಕಟ್ಟಿ, ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ನಂತರ ಮಹಜರನ್ನು ಮುಂದುವರೆಸಿ, ಟೈಪ್ ಮಾಡಿ, ಪ್ರಿಂಟ್ ತೆಗೆದು, ನಮ್ಮ ಸಹಿ ತೆಗೆದುಕೊಂಡರು. ಆ ಸಹಿಯನ್ನು ನಿಶಾನೆ ಪಿ3(ಬಿ) ಎಂದು ಗುರುತಿಸಲಾಯಿತು. ಈ ಎಲ್ಲಾ ಮಹಜರ್ ಅನ್ನು ಮಧ್ಯಾಹ್ನ 1.00 ಗಂಟೆಯಿಂದ 3.00 ಗಂಟೆಯ ಅವಧಿಯಲ್ಲಿ ಮಾಡಲಾಯಿತು. ಆರೋಪಿಗಳಾದ ಅಮ್ಜದ್ ಖಾನ್ ಮತ್ತು ನಾರಾಯಣಪ್ಪನನ್ನು ಈಗ ನೋಡಿ ಗುರುತಿಸಿದ್ದೇನೆ. ಆ ದಿನ ಅಮಾನತ್ತುಪಡಿಸಿಕೊಂಡ ಮಣ್ಣಿನ ಸೀಲ್ಡ್ ಪ್ಯಾಕೇಟ್ ನಲ್ಲಿ ನನ್ನ ಸಹಿಗಳು ಇವೆ. ಪ್ಯಾಕೇಟ್ ನ ಸೀಲ್ ಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು. ಸ್ಯಾಂಪಲ್ ಮಣ್ಣನ್ನು ಮು ಮಾ 1 ಎಂದು, ಸಾದಾ ಮಣ್ಣನ್ನು ಮು ಮಾ 2 ಎಂದು ಗುರುತಿಲಾಯಿತು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಮಾನ್ಯ ಅಭಿಯೋಜಕರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು